ಒ ಎಸ್ 214/2022 ಡಿ.ಡಬ್ಲ್ಯೂ:1

ಇಂದು ದಿ: 10.02.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಕೆ ಎಸ್ ಎಂ ವಕೀಲರಿಂದ:

ಪ್ರತಿವಾದಿ 1 ರಿಂದ 5 ಮತ್ತು ನಾನು ಒಂದೇ ಕೆಂಪಿಸಿದ್ದನಹುಂಡಿ ಗ್ರಾಮದವರು. 1 ನೇ ಪ್ರತಿವಾದಿ ಮತ್ತು ನಾನು ಸಂಬಂಧಿಕರೆಂದರೆ ಸರಿಯಲ್ಲ. 4 ವರ್ಷಗಳ ಹಿಂದೆ ನಾನು ಜಮೀನನ್ನು ಕ್ರಯಕ್ಕೆ ತೆಗೆದುಕೊಂಡೆ. ಸಾಕ್ಷಿಗೆ ಒಂದು ಕ್ರಯ ಪತ್ರದ ನಕಲನ್ನು ತೋರಿಲಾಗಿದ್ದು ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ನಿಪಿ 9 ಎಂದು ಗುರುತಿಸಲಾಯಿತು. ನನ್ನ ಪ್ರಮಾಣ ಪತ್ರದಲ್ಲಿ ನಾನು ಕ್ರಯದ ವರ್ಷವೆಂದು 2022 ಎಂದು ತೋರಿಸಿದ್ದೇನೆ ಎಂದರೆ ಸರಿ, ಅದು ತಪ್ಪು ನಾನು 2022ರಲ್ಲಿ ಖರೀದಿಸಿದ್ದೇನೆ. ಈ ಮೊದಲೇ ಒ ಎಸ್ 59/2008 ಎಂದು ವಿಚಾರಣೆ ನಡೆದು ದಿನಾಂಕ 17.02.2011 ವಿಭಾಗದ ದಾವೆ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಖರೀದಿಸುವ ಪೂರ್ವದಲ್ಲಿ ಎಫ್ ಡಿ ಪಿ 14/2011 ಆಗಿ ದಿನಾಂಕ 28.06.2016 ರಂದು ಅಂತಿಮ ಡಿಕ್ರಿ ಬರೆಯಲಾಗಿದೆ ಎಂದರೆ ಗೊತ್ತಿಲ್ಲ.

ದಾವಾ ಆಸ್ತಿ ಖರೀದಿಸುವ ಪೂರ್ವದಲ್ಲಿ ಗ್ರಾಮದಲ್ಲಿ ತಿಳಿಸಿದ್ದು ಅದು ವಾದಿಯರಿಗೆ ಗೊತ್ತಿಲ್ಲ. ಕ್ರಯದ ಪೂರ್ವದಲ್ಲಿ ವಾದಿಗಳಿಗೆ ನೊಟೀಸ್ ಕೊಟ್ಟು ಅವರ ತಕರಾರು ಇದೆ ಎಂದು ನಾನು ತಿಳಿದುಕೊಂಡಿಲ್ಲ. ಯಾವುದೇ ಪತ್ರಿಕೆ ಪ್ರಕಟಣೆಯನ್ನು ಸಹ ನೀಡಿಲ್ಲ. ನಾನು ಸದ್ಭಾವಿತ ಕ್ರಯ ದಾರನಲ್ಲ ಮತ್ತು ವಾದಿಗೆ ಬರಬೇಕಾದ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾನು 1 ರಿಂದ 5ನೇ ಪ್ರತಿವಾದಿ ಜೊತೆ ಸೇರಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ತಿ ಖರೀದಿಸುವ ಪೂರ್ವದಲ್ಲಿಯೇ ದಾವಾ ಆಸ್ತಿಗೆ ಸಂಬಂಧಪಟ ವಿಚಾರಣೆಯಾಗಿ ಡಿಕ್ರಿಯಾದ ಕಾರಣ ನನ್ನ ಕ್ರಯ ಪತ್ರಕ್ಕೆ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.